

# ಕಿರಣ್ ರಾಜ್ 'ಮೇಘ' ಸಂದೇಶ

'ಕನ್ನಡತಿ' ಧಾರಾವಾಹಿ ಖ್ಯಾತಿಯ ನಟ ಕಿರಣ್ ರಾಜ್, 'ಮೇಘ' ಸಂದೇಶ ಹೊತ್ತು ಬರುತ್ತಿದ್ದಾರೆ. ಸಿನಿಮಾ ಮೂಲಕ ಪ್ರೀತಿಯ ಹೊಸ ಸಂದೇಶವನ್ನು ನೀಡಲಿದ್ದಾರೆ.

ಚರಣ್ ನಿರ್ದೇಶನದ 'ಮೇಘ' ಚಿತ್ರದಲ್ಲಿ ಕಿರಣ್ ರಾಜ್ ನಟಿಸುತ್ತಿದ್ದಾರೆ. ತಮ್ಮ ಪಾತ್ರದ ಬಗ್ಗೆಯೂ ಅವರು ಸಾಕಷ್ಟು ಮಾತನಾಡಿದ್ದಾರೆ. 'ನಾನು ಹಿಂದೆ ಮಾಡಿರದಂಥ ಪಾತ್ರ ಮಾಡಲು ಈ ಚಿತ್ರ ಅವಕಾಶ ಮಾಡಿಕೊಟ್ಟಿದೆ. ಈ ಸಿನಿಮಾದ ಕಥಾಹಂದರ ಪ್ರೀತಿಯಾದರೂ ಚಿತ್ರದಲ್ಲಿನ ಹಲವು ಎಮೋಷನ್‌ಗಳು ಗಮನಸೆಳೆಯುತ್ತವೆ. ನಾನು ಕೂಡ ಈ ಭಾವನೆಗೆ ಮರುಳಾದವನೇ. ಈ ಚಿತ್ರದ ಕಥೆ ಕೇಳಿ, ನನ್ನ ಅಪ್ಪನಿಗೆ ಬುಲೆಟ್ ಕೊಡಿಸಿದ್ದೇನೆ. ಈಗಿನ ಪೀಳಿಗೆಗೆ ಬೇಕಾದ ಎಲ್ಲಾ ಅಂಶಗಳು ನಮ್ಮ ಚಿತ್ರದಲ್ಲಿವೆ' ಎಂದಿದ್ದಾರೆ.

ಮೂಲತಃ ಐಟಿ ಉದ್ಯೋಗಿಯಾಗಿದ್ದ ನಿರ್ದೇಶಕ ಚರಣ್, 'ಮೇಘ' ಮೂಲಕ ನಿರ್ದೇಶನದ ಹೊಸ ಸವಾಲಿಗೆ ಅಡಿಯಿಟ್ಟಿದ್ದಾರೆ. ಕೋವಿಡ್ ನಂತರ ಐಟಿ ಕೆಲಸ ಬಿಟ್ಟು ವಿ. ನಾಗೇಂದ್ರಪ್ರಸಾದ್ ಅವರ ಬಳಿ ಸಿನಿಮಾ ಕೆಲಸ ಕಲಿಯಲು ಆರಂಭಿಸಿದ ಅವರು ಈ ಸಿನಿಮಾ ಮೂಲಕ ತಮ್ಮ ಅದೃಷ್ಟವನ್ನು ಪರೀಕ್ಷಿಸಿಕೊಳ್ಳುತ್ತಿದ್ದಾರೆ.

'ಮೇಘಗಳು ಆಕಾಶದಲ್ಲಿ ಯಾವಾಗಲೂ ಒಟ್ಟಿಗೆ ಚಲಿಸುತ್ತಿರುತ್ತವೆ. ಆದರೆ ಎಲ್ಲೋ ಮಳೆ ಸುರಿಸುತ್ತವೆ. ಇದನ್ನೇ ಇಟ್ಟುಕೊಂಡು ಪ್ರೇಮ ಕಥೆ ಸಿದ್ಧ ಮಾಡಿದೆ. ನಮ್ಮ ಸಿನಿಮಾದಲ್ಲಿ 'ಮೇಘ' ಎಂದರೆ ಪ್ರೀತಿ ಎಂದು. ಕಿರಣ್ ರಾಜ್ ಹಾಗೂ ಕಾಜಲ್ ಕುಂದರ್ ನಾಯಕ– ನಾಯಕಿಯಾಗಿ ನಟಿಸಿದ್ದಾರೆ. ರಾಜೇಶ್ ನಟರಂಗ ಸೇರಿದಂತೆ ಅನೇಕ ಕಲಾವಿದರು ಈ ಚಿತ್ರದಲ್ಲಿದ್ದಾರೆ. ಪ್ರೀತಿ, ಸ್ನೇಹ, ಸೆಂಟಿಮೆಂಟ್ ಎಲ್ಲಾ ಅಂಶಗಳು ಈ ಚಿತ್ರದಲ್ಲಿವೆ. ಜೋಯಲ್ ಸಕ್ಕರಿ ಸಂಗೀತ ಸಂಯೋಜಿಸಿರುವ ಐದು ಸುಮಧುರ ಹಾಡುಗಳು ಈ ಚಿತ್ರದಲ್ಲಿವೆ' ಎಂದು ಸಿನಿಮಾ ಬಗ್ಗೆ ಮಾತನಾಡಿದ್ದಾರೆ ಚರಣ್.

ಸಿನಿಮಾದಲ್ಲಿ ನಾಯಕ ಹಾಗೂ ನಾಯಕಿ ಇಬ್ಬರ ಹೆಸರೂ 'ಮೇಘ' ಎಂದಿರುವುದು ಇದರ ಮತ್ತೊಂದು ಅಂಶ. ಈಚೆಗೆ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು, ಬಿಡುಗಡೆಯ ಹೊಸ್ತಿಲಿನಲ್ಲಿದೆ. ■

# 'ಭೀಮ'ನಿಗೆ ಮತ್ತೊಂದು ಬಲ

'ಭೀಮ' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿರುವ ನಟ ದುನಿಯಾ ವಿಜಯ್,ಈ ಸಮಯದಲ್ಲೇ ಮತ್ತೊಂದು ಸಿನಿಮಾಗೆ ಸಿದ್ಧತೆ ನಡೆಸಿದ್ದಾರೆ. ಈ ಹೊಸ ಸಿನಿಮಾದ ಪೋಸ್ಟರ್ ಕೂಡ ಈಚೆಗೆ ಬಿಡುಗಡೆಯಾಗಿದೆ.

ಈ ಬಾರಿ 'ಕಾಟೇರ' ಕಥೆಗಾರ ಜಡೇಶ್ ಕೆ. ಹಂಪಿ, ವಿಜಯ್‌ಗೆ ಆ್ಯಕ್ಷನ್ ಕಟ್ ಹೇಳುತ್ತಿರುವುದು ವಿಶೇಷ.

ಪ್ರಜ್ವಲ್ ದೇವರಾಜ್ ನಟನೆಯ 'ಜಂಟಲ್‌ಮ್ಯಾನ್' ಸಿನಿಮಾ ಮೂಲಕ ಚಂದನವನದಲ್ಲಿ ಜಡೇಶ್ ಖ್ಯಾತಿ ಪಡೆದಿದ್ದರು. ಇದಾದ ಬಳಿಕ ಶರಣ್ ನಟನೆಯ 'ಗುರುಶಿಷ್ಯರು' ಸಿನಿಮಾ ಮೂಲಕ ತಮ್ಮ ನಿರ್ದೇಶನದ ಸಾಮರ್ಥ್ಯವನ್ನು ಅವರು ಸಾಬೀತುಪಡಿಸಿದ್ದರು. ಆ ಸಿನಿಮಾ ಜಡೇಶ್‌ಗೆ ಯಶಸ್ಸನ್ನು ತಂದುಕೊಟ್ಟಿತ್ತು.

ಇತ್ತೀಚೆಗೆ ತೆರೆಕಂಡ 'ಕಾಟೇರ' ಸಿನಿಮಾದ ಕಥೆಗಾರರಾದ ಜಡೇಶ್, ನೈಜ ಘಟನೆಗಳನ್ನು ಆಧರಿಸಿದ ಮತ್ತೊಂದು ಕಥೆ ಹೆಣೆದಿದ್ದಾರೆ. ವಿಜಯ್ ಅವರ 29ನೇ ಸಿನಿಮಾ ಇದಾಗಿರುವ ಕಾರಣ, ಸದ್ಯಕ್ಕೆ ಚಿತ್ರಕ್ಕೆ 'VK29' ಎಂಬ ಶೀರ್ಷಿಕೆ ಇಡಲಾಗಿದೆ. 'ಇದು ಆಳಿದವರ ಕಥೆಯಲ್ಲ, ಅಳಿದು ಉಳಿದವರ ಕಥೆ...!' ಎಂಬ ಅಡಿಬರಹವೂ ಇದಕ್ಕೆ ಜೊತೆಯಾಗಿದೆ.

'VK29'ನಲ್ಲಿ ವಿಜಯ್ ಅವರ ಹಿರಿಯ ಮಗಳು ಮೋನಿಕಾ, ತಂದೆಯ ಜೊತೆಗೆ ಮಗಳ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ. ■

